

ಕಾನ್ವೆಂಟ್‌ಗಳಿಗೆ ಅಡ್ಮಿಶನ್ ಭರಾಟೆ ಜೋರಾಗಿತ್ತು. ಪರ್ಮೇಶಿ ಮತ್ತು ಪದ್ದಮ್ಮ ತಮ್ಮ ಕುಮಾರ ಕಂಠೀರವ ಅಪ್ಪಿಯನ್ನು ಕಾನ್ವೆಂಟಿಗೆ ಸೇರಿಸಿ ಪುನೀತರಾಗಲು ಕಲ್‌ಪೊಟರೆ ಕಾನ್ವೆಂಟ್ ಹತ್ರ ಹೋದಾಗ ಅಲ್ಲೊಂದು ದೊಡ್ಡ ಕ್ಯೂ ಇತ್ತು. ನಿರಾಶ್ರಿತರ ಶಿಬಿರದ ಸಂತ್ರಸ್ತರಂತೆ ಪೋಷಕ ಬಂಧುಗಳು ವಾಟರ್ ಕ್ಯಾನ್, ಮಿಲ್ಕ್ ಬಾಟಲ್, ನ್ಯಾಪ್‌ಕಿನ್ ಹಿಡ್ಕೊಂಡು ಬ್ರೆಡ್ಡು, ಬನ್ನು ಕಡೀತಾ ತಮ್ಮ ಸಂದರ್ಶನದ ಸರದಿಗೆ ಚಡಪಡಿಸ್ತಾ ನಿಂತಿದ್ರು.

ಕಲ್‌ಪೊಟರೆ ಕಾನ್ವೆಂಟ್ ಅಂದ್ರೆ ಅಷ್ಟು ಫೇಮಸ್ಸು. ಅಲ್ಲಿ ಸೀಟು, ಬೆಂಚಿರಲಿ ಕಸಬರಿಕೆ ಇಡೋ ಜಾಗದಲ್ಲಿ ಒಂದಿಷ್ಟು ಜಾಗ ಸಿಕ್ರೂ ಪೇರೆಂಟ್ಸ್ ಲಕ್ಷ ಲಕ್ಷ ಸುರಿದು ತಮ್ಮ ಮಕ್ಕಳಿಗೆ ತಾವೇ ಕುರ್ಚಿ ತಂದು ಹಾಕಕ್ಕೆ ರೆಡಿ ಇದ್ರು. ಆ ಕಾನ್ವೆಂಟಲ್ಲಿ ಮಣ್ ಹೊತ್ರೆ ತಮ್ಮ ಮಕ್ಕಳು ಎಂಜಿನಿಯರ್ರೋ, ಡಾಕ್ಟರ್ರೋ ಆಗೋದು ಗ್ಯಾರೆಂಟಿ ಅನ್ನೋ (ಮೂಢ)ನಂಬಿಕೆ ಜನರಲ್ಲಿ ಬೇರೂರಿತ್ತು.

ಪರ್ಮೇಶಿ, ಪದ್ದಮ್ಮನವರ ಸರದಿ ಬರುವ ವೇಳೆಗೆ ಅಪ್ಪಿ ತುಂಬಾ ಅರ್ಜೆಂಟು ಅಂತ ಬೆರಳು ಮೇಲೆತ್ತಿದ. 'ಈಗದಕ್ಕೆಲ್ಲಾ ಟೈಮಿಲ್ಲ ನಡಿ' ಎಂದು ಪದ್ದಮ್ಮ ಗದರಿ ಅವನನ್ನು ದರ ದರ ಎಳೆದುಕೊಂಡೇ ಪರ್ಮೇಶಿಯೊಂದಿಗೆ ಸಂದರ್ಶನ ಕೊಠಡಿಗೆ ಎಂಟ್ರಿ ಕೊಟ್ರು. ತಕ್ಷಣ ಹೆಡ್‌ಮಿಸ್ಟ್ರೆಸ್ ನೀವು ಸಿಇಟಿ ಲಿ ಪಾಸಾಗಿದೀರಿ, ಕಂಗ್ರಾಟ್ಸ್ ಅಂದ್ರು. ಪರ್ಮೇಶಿ, ಪದ್ದಮ್ಮ ಅವಾಕ್ಕಾದ್ರು. ನಾವು ಈಗ ತಾನೇ ಒಳಗೆ ಕಾಲಿಡ್ತಿದೀವಿ, ಇದ್ಯಾವ ಸಿಇಟಿ? ಎಂದು ದಂಪತಿ ಮುಖ ಮುಖ ನೋಡಿಕೊಂಡ್ರು.

'ಆಶ್ಚರ್ಯ ಆಯ್ತಾ? ಸಿಇಟಿ ಅಂದ್ರೆ ಕಾಮನ್ ಎಂಟ್ರೆನ್ಸ್ ಟೆಸ್ಟ್, ಅಂದ್ರೆ ಗಂಡ ಹೆಂಡತಿ ಇಬ್ರೂ ಒಬ್ಬರಿಗೊಬ್ಬರು ಜಾಮ್ ಆಗದೆ ಒಂದೇ ಬಾಗಿಲಲ್ಲಿ ಬರ್ತಾರಾ ಅಂತ ನೋಡ್ತೀವಿ'– ಹೆಡ್‌ಮಿಸ್ಟ್ರೆಸ್ ಸಮಜಾಯಿಸಿ ನೀಡುದ್ರು.

ಈ ಸಿಇಟಿ ಯಾಕೆ?– ಪರ್ಮೇಶಿ ಕೇಳಿದ.

'ಗಂಡ ಹೆಂಡ್ತಿ ಓವರ್ ಸೈಜ್ ಇದ್ರೆ ಮುಂದೆ ಮಗುನೂ ಹಾಗೇ ಆಗಬಹುದಲ್ವಾ? ಹೆರಿಡಿಟರಿ ಯಾರಪ್ಪನ ಮನೇದು ಹೇಳಿ? ಹೀಗೆ ಒಂದೇ ಸಾರಿ ಬಾಗಿಲಲ್ಲಿ ಬರಕ್ಕಾಗದೆ ಸಿಗಾಕ್ಕೊಂಡು ಸಿಇಟಿ ಲಿ ಫೇಲ್ ಆದ್ರೆ ಮಗೂಗೆ ಡಬಲ್ ಸೀಟಿನ ಡೊನೇಶನ್ ಚಾರ್ಜ್ ಮಾಡ್ತೀವಿ' ಅಂದ್ರು!

ಪರ್ಮೇಶಿ, ಪದ್ದಮ್ಮ 'ಸದ್ಯ ಬಚಾವ್' ಅಂತ ನಿಟ್ಟುಸಿರು ಬಿಟ್ರು.

ಸಂದರ್ಶನ ಆರಂಭವಾಯಿತು. ಹೆಡ್‌ಮೇಡಂ ಸಹಿತ ಮೂವರು ಮಹಿಳಾ ಮಣಿಗಳು ತಲೆಬುಡವಿಲ್ಲದ ಪ್ರಶ್ನೆಗಳನ್ನು ಕೇಳಿ ದಂಪತಿಯ ತಲೆ ತಿಂದರು.

'ಗಂಡ ಹೆಂಡತಿ ಇಬ್ರೂ ಎಜುಕೇಟೆಡ್ಡಾ?'

ಹೌದು, ಮದ್ವೆ ಆದ್ಮೇಲೆ ಜೊತೆಗೆ ಫೂಲ್ಸ್ ಅನ್ನೋದೂ ಸೇರ್ಕೊಂಡಿದೆ... ಎಂದು ಗೊಣಗಿದ ಪರ್ಮೇಶಿ.

'ಏನಂದ್ರಿ?'

ಏನಿಲ್ಲ!

'ಮಗುವಿನ ಹೋಂ ವರ್ಕ್ ಮಾಡಲಿಕ್ಕೆ ಎಷ್ಟು ಟೈಂ ಮೀಸಲಿಡ್ತೀರಿ?'

ನಿಮ್ ಮೇಡಂಗಳ ಹತ್ರನೇ ಟ್ಯೂಷನ್‌ಗೆ ಹಾಕ್ತೀವಲ್ಲ..

'ವೆರಿಗುಡ್, ನಿಮ್ಮ ವೃತ್ತಿ ಲಂಚ ಸಹಿತವೇ? ಲಂಚ ರಹಿತವೇ?'

ಪರ್ಮೇಶಿ ಹೇಳಲಾಗದೆ ಕೈ ಹೊಸೆದ. ಕೈ ಆಟೋಮ್ಯಾಟಿಕ್ ಆಗಿ ಟೇಬಲ್ ಕೆಳಗೆ ಹೋಗಿದ್ದನ್ನು ಹೆಡ್ ಮೇಡಂ ನೋಡುದ್ರು.

'ಅರ್ಥ ಆಯ್ತು ಬಿಡಿ. ಮುಂದೆ ಎಷ್ಟು ಮಕ್ಕಳನ್ನ ಈ ಕಾನ್ವೆಂಟಿಗೆ ಸೇರಿಸಕ್ಕೆ ರೆಕ್ಮೆಂಡ್ ಮಾಡ್ತೀರಿ?'

ಕನ್ನಡ ಶಾಲೆಯ ಎಲ್ಲಾ ಮಕ್ಳಿಗೂ ಹೇಳ್ತೀವಿ ಮೇಡಂ..

'ಗುಡ್, ನಿಮ್ಮನೇಲಿ ಯಾವ್ಯಾವ ಬುಕ್ ಇದೆ?'

ಫೇಸ್‌ಬುಕ್, ಪಾಸ್ ಬುಕ್, ಚೆಕ್‌ಬುಕ್ ಎಲ್ಲಾ ಇವೆ!

–ಹೀಗೆ ಹುಚ್ಚು ಹುಚ್ಚಾಗಿ ಏನೇನೋ ಕೇಳುದ್ರು. ಪರ್ಮೇಶಿ, ಪದ್ದಮ್ಮ ಎಲ್ಲದಕ್ಕೂ ಜಾಣ್ಮೆಯಿಂದ ಉತ್ತರಿಸಿ ಸೈ ಎನಿಸಿಕೊಂಡ್ರು.

'ಮಗು ಏನೇನು ಕಲ್ತಿದೆ?'

ಕಲೀಬಾರದ್ದೆಲ್ಲ ಕಲ್ತಿದಾನೆ. ಮೊಬೈಲಲ್ಲಿ ಮೆಸೇಜ್ ಮಾಡೋದು, ಇಂಟರ್‌ನೆಟ್‌ನಲ್ಲಿ ಚಾಟ್ ಮಾಡೋದು ಕಲ್ತಿದಾನೆ. ಗೂಗಲ್ ಕನ್ನಡಕ ಹಾಕ್ತಾನೆ, ಮಿಸ್ಟರ್ ಬೀನ್ ತರ ಮನೆ ತುಂಬಾ ಅಡಾವುಡಿ ಮಾಡ್ತಾನೆ, ಬಾಲಿವುಡ್ ಸಿನಿಮಾ ನೋಡ್ತಾನೆ. 'ಯೇ ಮೊಹಬತೇ' ಸೀರಿಯಲ್ ನೋಡ್ತಾನೆ. ಯು ಟ್ಯೂಬಲ್ಲಿ 'ಶೀಲಾ ಕಿ ಜವಾನಿ..' ಡೌನ್‌ಲೋಡ್ ಮಾಡ್ತಾನೆ. ಫೇಸ್‌ಬುಕ್‌ಗೆ 'ಚಿಕ್ನಿ ಚಮೇಲಿ' ಅಪ್ ಲೋಡ್ ಮಾಡ್ತಾನೆ. ಕತ್ರಿನಾ ಕೈಫ್‌ದು ಕಮಲಿ ಡ್ಯಾನ್ಸ್ ನೋಡ್ತಾನೆ, ಗಂಗ್ನಮ್, ಟ್ಯಾಪ್ ಡ್ಯಾನ್ಸ್ ಮಾಡ್ತಾನೆ.... ಹೆಮ್ಮೆಯಿಂದ ಹೇಳಿದ ಪರ್ಮೇಶಿ!

'ವೆರಿಗುಡ್, ಯಾವ್ದಾರೂ ರೈಮ್ ಹೇಳಕ್ಕೆ ಬರುತ್ತಾ?'

ಬರುತ್ತೆ. ಅಪ್ಪಿ ಜಾನಿ ಜಾನಿ ಎಸ್ ಪಪ್ಪಾ ರೈಮ್ ಹೇಳು.... ಎಂದರು ಪದ್ದಮ್ಮ.

ಅಪ್ಪಿ ತಲೆಯಾಡಿಸಿ ಶುರು ಮಾಡಿದ:

ಜಾನಿ ಜಾನಿ ಎಸ್ ಪಪ್ಪಾ  
ಫ್ಲರ್ಟಿಂಗ್ ಗರ್ಲ್ಸ್  
ನೋ ಪಪ್ಪಾ  
ಟೆಲಿಂಗ್ ಲೈಸ್  
ನೋ ಪಪ್ಪಾ  
ಓಪನ್ ಯುವರ್ ಮೌತ್  
ಹ ಹಾ ಹ್ಹಾ..

–ಅಪ್ಪಿ ಬಾಯೊಳಗಿದ್ದ ಚಿಂಗಮ್ ಊದಿ ಮೇಡಂ ಮುಖಕ್ಕೆ ತೂರಿದ. ಹೆಡ್‌ಮೇಡಂ ಅಪ್ಪಿ ಕೌಶಲಕ್ಕೆ ತಲೆದೂಗುದ್ರು. ಕಡೆಗೆ ಗಂಡ ಹೆಂಡತಿ ಇಬ್ಬರಿಗೂ ಕಾನ್ವೆಂಟ್ ಕುರಿತು 5 ಪದಗಳು ಮೀರದಂತೆ ಒಂದು ಸ್ಲೋಗನ್ ಬರೀರಿ ಅಂದ್ರು.

ಪದ್ದಮ್ಮ 'ಆಕರ್ಷಕ ಕಟ್ಟಡ, ಒಳ್ಳೇ ಶಿಕ್ಷಕಿಯರು' ಅಂತ ಬರುದ್ರು.

ಪರ್ಮೇಶಿ 'ಒಳ್ಳೇ ಕಟ್ಟಡ, ಆಕರ್ಷಕ ಶಿಕ್ಷಕಿಯರು' ಅಂತ ಉಲ್ಟಾ ಬರೆದ !

ಹೆಡ್‌ಮೇಡಂಗೆ ಪೂರಾ ಸಮಾಧಾನ ಆಯ್ತು. ಅಪ್ಪಿಯ ಎಲ್‌ಕೆಜಿ ಸೀಟ್ ಗ್ಯಾರೆಂಟಿ ಮಾಡಿ, 1 ಲಕ್ಷಕ್ಕೆ ರಶೀದಿ ಬರುದು ಕೈಗಿಟ್ರು. ಪರ್ಮೇಶಿ ಬ್ಯಾಗಲ್ಲಿ ತುಂಬ್ಕೊಂಡು ಬಂದಿದ್ದ ಪುಡಿ ನೋಟನ್ನೆಲ್ಲಾ ಎಣಿಸಿ ಕೊಟ್ಟ.

'ಇದಕ್ಕೆ ಸೈನ್ ಹಾಕಿ' ಅಂತ ಇನ್ನೊಂದು ಫಾರಂ ಮುಂದಿಟ್ರು ಹೆಡ್‌ಮೇಡಂ. 'ಅರೆ.. ಇದೇನು?' ಅಂತ ಕ್ಯಾತೆ ತೆಗೆದ ಪರ್ಮೇಶಿ.

'ಈ ಮಗೂನ ಅರ್ಧಕ್ಕೆ ಬಿಡಿಸಲ್ಲ, ಎರಡನೇ ಮಗುನೂ ನಮ್ ಕಾನ್ವೆಂಟ್‌ಗೇ ಸೇರುಸ್ತೀವಿ ಅಂತ ಬಾಂಡ್ ಬರೆದು ಕೊಡ್ಬೇಕು' ಎಂದು ಕಂಡೀಶನ್ ಹಾಕುದ್ರು ಹೆಡ್‌ಮೇಡಂ!

'ಎರಡನೇ ಮಗು ಆಗದಿದ್ರೆ?' ಎಂದು ಪದ್ದಮ್ಮನ ಕಡೆ ನೋಡಿ ಅನುಮಾನಿಸಿದ ಪರ್ಮೇಶಿ.

'ಟ್ರೈ ಮಾಡಿ. ಎರಡನ್ನ ಸೇರುಸುದ್ರೆ ಮೂರನೇದಕ್ಕೆ ಫ್ರೀ ಸೀಟು ಕೊಡ್ತೀವಿ' ಎಂದು ನಕ್ಕರು ಹೆಡ್‌ಮೇಡಂ.

ಪರ್ಮೇಶಿ, ಪದ್ದಮ್ಮ ಫಾರಂಗೆ ಸೈನಿಕ್ಕಿ ಅಪ್ಪಿ ಜೊತೆ ಈಚೆ ಬಂದ್ರು.

ಸ್ಕೂಲ್‌ನ ಆಯಾ, ಗುಡಾರದಂತೆ ನೇತಾಡ್ತಿದ್ದ ಶಾಮಿಯಾನ ಕಡೆ ಕೈ ತೋರಿಸಿ 'ಇಲ್ಲೇ ಬಿಡಿ ಮಗುನ' ಅಂದ್ಲು.

'ಲಕ್ಷ ರೂಪಾಯಿ ಕಿತ್ತಿದಾರೆ, ಇಲ್ಲಿ ನೋಡುದ್ರೆ ಪಾಯ ಹಾಕಿ ಅದರ ಮೇಲೆ ಶಾಮಿಯಾನ ಹಾಕಿದಾರೆ' ಎಂದು ಮುಖ ಹಿಂಡಿದರು ಪದ್ದಮ್ಮ.

'ಟೋಟಲ್ ಅಡ್ಮಿಶನ್ ಎಷ್ಟಾಗುತ್ತೆ ಅಂತ ನೋಡ್ಕಂಡು ಬಿಲ್ಡಿಂಗ್‌ನ ಗೋಡೆ ಉದ್ದ, ಎತ್ತರ ಡಿಸೈಡ್ ಮಾಡ್ತಾರೆ. ಅಲ್ಲಿತನ್ಕ ಹೀಗೇ ಟೆಂಪರರಿ ಅರೇಂಜ್‌ಮೆಂಟ್' ಅಂದ್ಲು ಆಯಾ!

ಹಿಂದೆ ತಿರುಗಿ ನೋಡಿದರೆ ಅಪ್ಪಿಯೇ ನಾಪತ್ತೆ. ಪರ್ಮೇಶಿ ಮಗರಾಯ ಅಪ್ಪಿ ಎಲ್ಲಿ ಎಂದು ಸುತ್ತಾ ನೋಡಿದ. ದೂರದಲ್ಲಿ ಅಪ್ಪಿ ಚಡ್ಡಿ ಅಗಲಿಸಿ ತನ್ನ ಭವಿಷ್ಯ ರೂಪಿಸುವ ಕಾನ್ವೆಂಟ್ ಗೋಡೆಯನ್ನು 'ಕ್ಯೂರ್' ಮಾಡ್ತಿದ್ದ!